**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: **04.02.2026**

**ಮುಂದುವರೆದ ಪಾಟೀ ಸವಾಲು:-** ಶ್ರೀ ಜಿ.ಎನ್.ಆರ್ ವಾದಿಯ ಪರ ವಕೀಲರಿಂದ

ನಿಡಿ-9 ರಂತೆ ಖುಷ್ಕಿ, ತರಿ, ಭಾಗಯ್ತು ಎಂದು ನಮೂದು ಆಗಿದ್ದು ಯಾವ ಕಾರಣಕ್ಕೆ ದಾಖಲಾತಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಹೊಲ ಮತ್ತು ಗದ್ದೆ ಎರಡು ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಖುಷ್ಕಿ, ತರಿ, ಭಾಗಯ್ತು ರಲ್ಲಿ ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದು ದಾಖಲಾತಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ಹೇಳಿದರು. ದಾವಾ ಸ್ವತ್ತಿನ ಸ.ನಂ ಸಂಬಂಧಪಟ್ಟಂತೆ ಸರ್ವೆ ನಂ ನನ್ನು ನಮೂದು ಮಾಡಿ ಬೆಲೆಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 2007 ರಲ್ಲಿ ಊರಿನಿಂದ ದೂರ ಇದೆ ಎಂದರೆ ಸಾಕ್ಷಿಯು ಕೆಲವು ಸ.ನಂ ಸ್ವತ್ತುಗಳು ಒಂದು ಕಿಮಿ ದೂರದಲ್ಲಿ ಇದ್ದು ಕೆಲವು ಸ್ವತ್ತುಗಳು ಹತ್ತಿರ ಇದೆ ಎಂದು ನುಡಿಯುತ್ತಾರೆ. ಕೆಲವು ಸ್ವತ್ತುಗಳು ಊರಿಗೆ ಹತ್ತಿರ ಹಾಗೂ ದೂರ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಯಾವುದು ದೂರ ಇರುವುದಿಲ್ಲ, ಹತ್ತಿರ ಇದೆ ಎಂದು ನುಡಿಯುತ್ತಾರೆ. ಊರಿನಿಂದ ದೂರ ಹಾಗೂ ಹತ್ತಿರ ಸ್ವತ್ತುಗಳಿಗೆ ಒಂದೊಂದು ಬೆಲೆ ಇದೆ ಎಂದರೆ ಸಾಕ್ಷಿಯು ಎಲ್ಲಾ ಸ್ವತ್ತುಗಳಿಗೆ ಒಂದೇ ಬೆಲೆ ಎಂದು ನುಡಿಯುತ್ತಾರೆ.

ನಿಡಿ-10 ರ ಸ್ವತ್ತು ಜಯಮ್ಮರವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ವೆಂಕಟೇಗೌಡರಿಗೆ ಸೇರಿದ್ದು ಅವರಿಗೆ ಗೊತ್ತಾಗದಂತೆ ಜಯಮ್ಮ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-10 ರ ಸ್ವತ್ತು ವೆಂಕಟೇಗೌಡರಿಗೆ ಸೇರಿದ್ದು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಿಡಿ10ರ ಸ್ವತ್ತನ್ನು ದಿ: 11.03.1992 ರಲ್ಲಿ ವೆಂಕಟೇಗೌಡರಿಂದ ಜಯಮ್ಮ ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯ ಪ್ರಕಾರ 16X 21 ಅಡಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆದಾ ಕಾರಣ ಸದರಿ ಸ್ವತ್ತು ಜಯಮ್ಮರವರ ಸ್ವಂತ ಆಸ್ತಿಯಾಗಿದ್ದು ಇದರಲ್ಲಿ ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಉಳಿದ ಸ್ವತ್ತುಗಳಲ್ಲಿ ಜಯಮ್ಮ ರವರಿಗೆ ಭಾಗವನ್ನು ತಪ್ಪಿಸಲು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ